ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಮಿತಿ (RDPR)

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯಕರ್ನಾಟಕ ದಿನಾಂಕ : DATE : 13/12/19

# ಕೆರೆಗಳ ಒತ್ತುವರಿ ಶೀಘ್ರ ತೆರವು

■ **ವಿಕ ಸುದ್ದಿಲೋಕ** ಬನ್ನೇರುಘಟ್ಟ

ಎಜೆ ವರದಿಯಂತೆ ಬೆಂಗಳೂರಿನಲ್ಲಿ ಸುಮಾರು 56 ಕೆರೆಗಳ ಸರ್ವೇ ಮಾಡಲಾಗಿದೆ. ವರದಿಯಲ್ಲಿ ಸಮಾರು 1 ಸಾವಿರ ಎಕರೆ ಕೆರೆ ಜಾಗ ಒತ್ತುವರಿ ಯಾಗಿದೆ ಎಂದು ತಿಳಿಸಿದ್ದು, ಕೂಡಲೇ ಕೆರೆಗಳ ಒತ್ತುವರಿ ಜಾಗಗಳನ್ನು ತೆರವು ಗೊಳಿಸಿ, ಕೆರೆಗಳನ್ನು ಉಳಿಸುವ ಜವಾ ಬ್ದಾರಿ ನಮ್ಮ ಮೇಲಿದೆ ಎಂದು ಸದನ ಸಮಿತಿ ಅಧ್ಯಕ್ಷ ಅರಗ ಜ್ಞಾನೇಂದ್ರ ಹೇಳಿದರು.

ಸದನ ಸಮಿತಿ ಸದಸ್ಯರು ಹುಳಿಮಾವು ಕೆರೆ ಏರಿ ಒಡೆದ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಅಲ್ಲಿನ ಸ್ಥಿತಿಗತಿ ಕುರಿತು ಪರಿಶೀಲಿಸಿದರು.

ಈ ವೇಳೆ ಹುಳಿಮಾವು ಕೆರೆ ಏರಿ ಒಡೆದ ಪ್ರಕರಣಕ್ಕೆಸಂಬಂಧಿಸಿದಂತೆ ಬೊಮ್ಮನಹಳ್ಳಿ ಶಾಸಕ ಸತೀಶ್ ರೆಡ್ಡಿ, "ಯಾವ ಮಾನದಂಡ ಇಟ್ಟುಕೊಂಡು ಬಫರ್ ಜೋನ್‌ನಲ್ಲಿ ಅಪಾರ್ಟ್‌ಮೆಂಟ್ ಕಟ್ಟಲು ಅನುಮತಿ ನೀಡಲಾಗಿದೆ? ಇದು ಅಕ್ರಮವಲ್ಲವೆ? ಅಧಿಕಾರಿಗಳು ಈ ಅಕ್ರಮಗಳಿಗೆ ಕುಮ್ಮಕ್ಕು ನೀಡುತ್ತಿರುವುದು ಎಷ್ಟು ಸರಿ?," ಎಂದು ಬಿಡಿಎ ಅಧಿಕಾರಿಗಳಿಗೆ ತರಾಟೆ ತೆಗೆದುಕೊಂಡರು.



ಹುಳಿಮಾವು ಕೆರೆಗೆ ಸದನ ಸಮಿತಿ ಸದಸ್ಯರು ಭೇಟಿ ನೀಡಿ ಪರಿಶೀಲಿಸಿದರು.

## ಹುಳಿಮಾವು ಕೆರೆ ಏರಿ ಒಡೆದ ಜಾಗ ಪರಿಶೀಲನೆ

"ಹುಳಿಮಾವು ಕೆರೆ ಏರಿ ಒಡೆದು 400ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಅವರಿಗೆ ಸರಕಾರದ ವತಿಯಿಂದ ಪರಿಹಾರ ನೀಡಲಾಗಿದೆ. ಜೊತೆಗೆ ಮನೆ ಕಳೆದುಕೊಂಡವರಿಗೆ ಮನೆ ನಿರ್ಮಿಸಲು ಬಿಬಿಎಂಪಿ ವತಿಯಿಂದ 5 ಲಕ್ಷರೂ. ನೀಡಲಾಗುವುದು," ಎಂದರು.

ಸಮಿತಿ ಸದಸ್ಯರಾದ ಎಂ.ಕೆ.ಪ್ರಾಣೇಶ್, ಸಂಜೀವ ಮಠಂದೂರು, ಉಪ ಮೇಯರ್ ರಾಮ್‌ಮೋಹನ್ ರಾಜ್, ಅರಕೆರೆ ಮುರಳಿ, ಬಿಬಿಎಂಪಿ ವಿಶೇಷ ಆಯುಕ್ತ ರಂದೀಪ್ ಹಾಜರಿದ್ದರು.